# ಶಿಕ್ಷಕರ ಸೇವಾಪೂರ್ವ ತಯಾರಿ–ಪಠ್ಯಕ್ರಮ, ಪ್ರಯೋಗ ಮತ್ತು ವಾಸ್ತವಿಕತೆ

**ಹೃದಯಕಾಂತ್ ದಿವಾನ್**

ಶಿಕ್ಷಣದ ಪ್ರಕ್ರಿಯೆ ಮತ್ತು ಅಭಿವೃದ್ಧಿಯನ್ನು ಬಲಪಡಿಸುವುದರಲ್ಲಿ ಶಿಕ್ಷಕ ಮಹತ್ವದವನಾಗಿದ್ದಾನೆ. ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸಿಕೊಂಡು ಮಗ್ನರಾಗುವಂತೆ ಮಾಡುವುದರಲ್ಲಿ ಶಿಕ್ಷಕನ ಸ್ವಭಾವ, ಪ್ರೇರಣೆ ಹಾಗೂ ಸಾಮರ್ಥ್ಯ ಮಹತ್ವದ್ದಾಗಿವೆ ಎನ್ನಲು ಸಾಕಷ್ಟು ಸಂಶೋಧನೆಗಳಾಗಿವೆ. ಶಿಕ್ಷಕರು ಶಿಕ್ಷಣದ ಪ್ರಮುಖ ಭಾಗ ಅನಿಸಬೇಕಿದ್ದರೆ ಅವರ ತಯಾರಿ, ಮನೋಧರ್ಮ, ಅನುಭವದ ನೆರವಿನಿಂದ ನಿರಂತರ ಕಲಿಕೆ ಹಾಗೂ ಒದಗಿಬರುವ ಅವಕಾಶಗಳ ಸಹಾಯದಿಂದ ಸ್ವತಃ ತಿದ್ದಿಕೊಳ್ಳುವುದಕ್ಕೆ ಒತ್ತು ಕೊಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ನಾವು ಶಿಕ್ಷಕರ ಸೇವಾಪೂರ್ವ ತಯಾರಿಯನ್ನು ಅವಲೋಕಿಸಬೇಕು. ಮೊದಲು ನಾವು ಶಿಕ್ಷಕರನ್ನು ತಯಾರು ಮಾಡುವ ರಚನೆ ಮತ್ತು ಅದರ ವ್ಯವಸ್ಥೆಯ ಅವಲೋಕನ ಮತ್ತು ವಿಶ್ಲೇಷಣೆಯೊಂದಿಗೆ ಪ್ರಾರಂಭಿಸಿ ನಂತರ ಅದಕ್ಕೆ ಬೇಕಾದ ಮಹತ್ವದ ಅಂಶಗಳು ಹಾಗೂ ಬರಬಹುದಾದ ಸವಾಲುಗಳನ್ನೂ, ಸಂಭಾವ್ಯ ವಸ್ತು ವಿಷಯಗಳನ್ನೂ, ಅದರ ಕಾರ್ಯವಿಧಾನಗಳ ಕುರಿತು ಪರಿಶೀಲಿಸುವೆವು.

ಶಿಕ್ಷಕನ ತಯಾರಿ ಅನೇಕ ಆಯಾಮಗಳುಳ್ಳದ್ದಾಗಿದೆ, ಇಲ್ಲಿ ನಾವು ಅವುಗಳಲ್ಲಿ ಕೆಲವನ್ನು ಸೂಚಿಸುವುದಲ್ಲದೆ ಈ ಕಾಲಕ್ಕೆ ಪ್ರಸ್ತುತವೂ, ಮಹತ್ವದ್ದೂ ಆದ ಕಾಳಜಿವಹಿಸಬೇಕದ ವಿಷಯಗಳ ಕುರಿತು ಮಂಡಿಸುತ್ತೇವೆ. ಈಚೆಗಿನ ದಶಕಗಳಲ್ಲಿ ಎರಡು ಕಾರಣಗಳಿಗಾಗಿ, ಶಿಕ್ಷಕರನ್ನು ಮರುತರಬೇತಿಗೆ ಒಳಪಡಿಸುವ ಹಲವಾರು ಕಾರ್ಯಾಚರಣೆಗಳು ನಡೆದಿವೆ. ಒಂದನೆಯ ಕಾರಣ–: ಶಿಕ್ಷಕರು ಆಗಿಂದಾಗ್ಗೆ ಮರುಚೈತನ್ಯವನ್ನು ಪಡೆಯಬೇಕು, ಅನುಭವಗಳನ್ನು ವಿನಿಮಯ ಮಾಡಿಕೊಳ್ಳಬೇಕು ಹಾಗೂ ಆ ಮೂಲಕ ಕಲಿಯಬೇಕು ಎಂಬುದಾದರೆ, ಎರಡನೆಯದು : ಶಿಕ್ಷಕರು ಪಡೆಯುವ ಸೇವಾಪೂರ್ವ ತಯಾರಿಯಲ್ಲಿನ ಆಲೋಚನೆ–ವಿಚಾರಗಳು ಈಗಿನ ಕಾಲದವುಗಳಲ್ಲ. ಆದ್ದರಿಂದ ಅವರು ಹೊಸ ತತ್ವಗಳು ಹಾಗೂ ವಿಚಾರಗಳಿಗೆ ತೆರೆದುಕೊಳ್ಳಬೇಕು ಎಂಬುದಾಗಿದೆ. ಇವೆರಡೂ ಕಾರಣಗಳು ಸಾಧಾರವಾಗಿದ್ದು, ಸೇವಾಪೂರ್ವ ತರಬೇತಿಯ ಕುರಿತು ಮಹತ್ವದ ಪ್ರಶ್ನೆಗಳನ್ನು ಎತ್ತುತ್ತವೆ. ಒಂದು ಮಹತ್ವದ ಪ್ರಶ್ನೆ, ಈ ತರಬೇತಿಯು ಇಂದಿನ ಕಾಲಕ್ಕೆ ಎಷ್ಟು ಪ್ರಸ್ತುತ ಎಂಬುದಾಗಿದ್ದರೆ ಎರಡನೆಯದು ಅದರ ಅವಧಿ, ವಿಧಾನ ಹಾಗೂ ಗತಿಗೆ ಸಂಬಂಧಿಸಿದ್ದಾಗಿದೆ. ನಾವು ಈಗ ಎರಡನೇ ಪ್ರಶ್ನೆ – ಅಂದರೆ ತರಬೇತಿ ಕಾರ್ಯಕ್ರಮದ ಅವಧಿ, ಕಾಲ, ಗತಿ ಹಾಗೂ ಅದನ್ನು ಆಯೋಜಿಸುವ ಸ್ಥಳ ಎಲ್ಲಿ ಎಂಬುದನ್ನು ಪರಿಶೀಲಿಸೋಣ.

## ಶಿಕ್ಷಕನ ತಯಾರಿಯ ರಚನೆ ಹೇಗಿರಬೇಕು?

ಕಾರ್ಯಕ್ರಮದ ಕಾಲ ಹಾಗೂ ವ್ಯವಸ್ಥೆಯನ್ನು ಮೂರು ಯುಕ್ತ ವಿಧಾನಗಳಲ್ಲಿ ವಿಭಾಗಿಸಬಹುದು. ಒಂದನೆಯದು– ಎಲ್ಲಾ ಶಿಕ್ಷಕ ತರಬೇತಿಯನ್ನೂ ಶಿಕ್ಷಕಿ ಆಗುವ ಮೊದಲೇ ಮಾಡಿ ಮುಗಿಸುವುದು, ಅರ್ಹತಾ ಪತ್ರ ದೊರಕಿದ ಮೇಲೆ ಮಾತ್ರವೇ ಶಾಲೆಗಳಲ್ಲಿ ಶಿಕ್ಷಕಿಯಾಗುವುದು. ಇದರಲ್ಲಿ ಇರುವ ಮುಖ್ಯ ಸಂದೇಶವೆಂದರೆ ತರಬೇತಿಗೆ ಅಭ್ಯರ್ಥಿಯ ಆಯ್ಕೆಯನ್ನು ಸಮರ್ಪಕವಾಗಿ ಮಾಡುವುದು, ಹಾಗೂ ಆನಂತರ ವ್ಯಕ್ತಿಯನ್ನು ಸಮರ್ಪಕ ಮತ್ತು ಸಮರ್ಥ ಶಿಕ್ಷಕಿಯಾಗಿ ಎಲ್ಲಾ ವಿಧಗಳಲ್ಲಿಯೂ ರೂಪುಗೊಳಿಸಿ ಶಿಕ್ಷಕಿಯ ಅರ್ಹತಾಪತ್ರವನ್ನು ನೀಡುವುದು. ಇಂದು ನಾವು ಭಾರತದಲ್ಲಿ ಉಪಯೋಗಿಸುವುದು ಇದೇ 'ಒಂದೇ ಏಟಿಗೆ ಎಲ್ಲವನ್ನೂ ಮುಗಿಸುವ' ವಿಧಾನವಾಗಿದೆ. ಅಲ್ಲದೆ ಈಚೆಗೆ ಕೈಗೊಂಡಿರುವ ತೀರ್ಮಾನಗಳು ಸಹಾ ಇದೇ ಒಲವನ್ನು ಇನ್ನಷ್ಟು ಗಟ್ಟಿಗೊಳಿಸುತ್ತವೆ.

ಎರಡನೆಯ ವಿಧಾನದಲ್ಲಿ, ಪ್ರಾರಂಭಿಕ ತಯಾರಿ ವಸ್ತುಶಃ ಏನೂ ಇರುವುದಿಲ್ಲ. ಸಂಕ್ಷಿಪ್ತವೂ ಚುರುಕಿನದ್ದೂ ಆದ ಒಂದು ತರಬೇತಿಯ ನಂತರ ನೇರವಾಗಿ ಶಾಲೆಗೆ ಕಳಿಸಲಾಗುತ್ತದೆ. ಅಲ್ಲಿ ಅಭ್ಯರ್ಥಿಗಳ ಸಣ್ಣ ಗುಂಪುಗಳನ್ನು ಮಾಡಿ ಅವುಗಳಿಗೆ ಒಬ್ಬ ತರಬೇತಿದಾರ ಅಥವಾ ಮಾರ್ಗದರ್ಶಕ ಅಥವಾ ಅಂತಹುದೇ ಇನ್ಯಾವುದೇ ಕಾರ್ಯವಿಧಾನದ ಮೂಲಕ ನಿಯಮಿತವಾಗಿ ಸಂವಾದ, ಸಂವಹನ ಏರ್ಪಡಿಸುವುದು. ಬಹುತೇಕ ಶಾಲೆಯಲ್ಲಿಯೇ ನಡೆಯುವ ಈ ರೀತಿಯ ಸಂವಾದಗಳು ವಿವಿಧ ರೀತಿಯ ಕೆಲಸಗಳಿಂದ ಹಾಗೂ ಪರ್ಯಾಲೋಚನೆಗಳಿಂದ ಕೂಡಿರಬಹುದು. ಅಭ್ಯರ್ಥಿ ಅವುಗಳನ್ನು ಪೂರೈಸಿ ವರದಿ ಕೊಡುವ ಪದ್ಧತಿ ಅನುಸರಿಸುವುದು. ಅಭ್ಯರ್ಥಿ ಶಾಲೆ ಸೇರಿದ ಕೆಲವು ವರ್ಷಗಳ ಕಾಲ ಇದು ಹೀಗೆಯೇ ನಡೆದು ಆಮೇಲೆ ಇಂತಹ ಕಾರ್ಯಕ್ರಮಗಳ ಮರುಕಳಿಕೆ ಹಾಗೂ ಕಾರ್ಯದ ಅವಧಿ ಕಡಿಮೆಯಾಗುವುದು. ತನ್ನ ಹಾಗೆಯೇ ಕಷ್ಟಪಡುತ್ತಿರುವ ಶಿಕ್ಷಕರ ಅನುಭವದಿಂದ ಕಲಿಯುವುದಲ್ಲದೆ ಬೇರೆಯವರ ಜತೆಯಲ್ಲಿ ತಾನು ಏನು ಮಾಡುತ್ತಿದ್ದೇನೆ ಎಂಬುದನ್ನು ಪದೇಪದೇ ತುಲನೆ ಮಾಡಿಕೊಂಡು ಹೊಸತನ್ನು ಕಲಿಯುವುದಕ್ಕೆ ಇದರಲ್ಲಿ ಸಾಧ್ಯವಾಗುತ್ತದೆ.

ಮೇಲಿನ ಎರಡೂ ವಿಧಾನಗಳನ್ನು ವಿವಿಧ ಪ್ರಮಾಣಗಳಲ್ಲಿ ಬೆರೆಸಿ ತಯಾರಿಸಿದ್ದೇ ಮೂರನೆಯ ವಿಧಾನ. ಶಿಕ್ಷಕರ ಸೇವಾ ಪೂರ್ವ ತಯಾರಿಯಲ್ಲಿ ಶಿಕ್ಷಕರನ್ನು ತಯಾರಿಸುವ ಬೇರೆ ಮಾದರಿಗಳನ್ನೂ ಪೂರಕವಾಗಿ ಸೇರಿಸಿಕೊಳ್ಳಬೇಕು ಎಂಬುದಕ್ಕೆ ಈ ವಿಧಾನ ಮಹತ್ವ ನೀಡುತ್ತದೆ. ಇದರಲ್ಲಿ ಹೆಚ್ಚು ದೀರ್ಘವಾದ ಸೇವಾ ಪೂರ್ವ ತಯಾರಿಯೂ ಆಮೇಲೆ ಶಾಲೆಯೊಳಗಣ

ಒಳಸೇವೆಯೂ ಮತ್ತೆ ಸೇವಾಪೂರ್ವ ತರಬೇತಿಯ ಕೆಲವು ಅಧ್ಯಯನವೂ ಇರುತ್ತವೆ. ಅಲ್ಲದೆ ಅಭ್ಯರ್ಥಿಗೆ ಕೆಲವಾರು ರೀತಿಯ ಅಧ್ಯಯನಗಳ ಪೈಕಿ ತನಗೆ ಇಷ್ಟವಾಗುವ ಅಧ್ಯಯನದ ಆಯ್ಕೆಯ ಅವಕಾಶವನ್ನೂ ನೀಡಬಹುದಾಗಿದೆ.

ಎರಡನೇ ವಿಧಾನದಲ್ಲಿ ವಿದ್ಯಾರ್ಥಿ–ಶಿಕ್ಷಕಿಗೆ ಶಾಲೆಯಲ್ಲಿ ಹಾಗೂ ತರಗತಿಯಲ್ಲಿ ಸಿಗುವ ಸಮಯದ ಪಾಲು ದೊಡ್ಡ ಪ್ರಮಾಣದ್ದು. ಒಂದನೇ ವಿಧಾನದಲ್ಲಿ ಶಾಲೆಯ ಅನುಭವ ಇಲ್ಲವೆಂದಲ್ಲ; ಆದರೆ ಅದು ಕಡಿಮೆ ಹಾಗೂ ಅದರ ಉದ್ದೇಶ ಮತ್ತು ಪ್ರಕ್ರಿಯೆ ಬೇರೆಯೇ ಆಗಿದೆ. ಸುದೀರ್ಘವಾದ ಪ್ರಾರಂಭಿಕ ಶಿಕ್ಷಕ ತರಬೇತಿ ಉತ್ತಮವೇ ಹಾಗೂ ಅಗತ್ಯವೇ ಅಥವಾ ಶಿಕ್ಷಕಿಯಾಗಿ ರೂಪಿಸುವ ಪ್ರಕ್ರಿಯೆ ಹೆಚ್ಚು ನಿರಂತರವೂ ಸ್ಪಂದನಾತ್ಮಕವೂ ಆಗಿರಬೇಕೇ ಎಂಬ ಪ್ರಶ್ನೆಯನ್ನು ಈ ಮಾದರಿಗಳು ಮುಂದಿಡುತ್ತವೆ. ಮೊದಲಿಗೆ ಸಂಕ್ಷಿಪ್ತವಾದ ಪ್ರಾರಂಭಿಕ, ಸಾಂಸ್ಥಿಕ ನೆಲೆಯ ಸಂವಾದ–ಸಂವಹನವನ್ನು ಏರ್ಪಡಿಸಿ ಆ ನಂತರದ ಬಹುತೇಕ ಎಲ್ಲಾ ಸಮಯವನ್ನೂ ಒಂದು ಶಾಲೆಯೊಳಗಣ ನಿರಂತರ ಅನುಭವದ ಪ್ರಕ್ರಿಯೆಗೆ ಬಿಡಬಹುದೇ? ಶಾಲೆಯೊಳಗಣ ಅನುಭವ, ವಿಲೀನತೆ ಅಥವಾ ಬೇರಾವುದೇ ಹೆಸರಿನಿಂದ ಕರೆಯುವ ಈ ಪದ್ಧತಿಯ ಮುಖ್ಯ ಉದ್ದೇಶ ಮತ್ತು ಸ್ವಭಾವ ಏನಿರಬೇಕು?

**ಸೇವಾಪೂರ್ವ ಶಿಕ್ಷಕ ತಯಾರಿಯು ತಾನಾಗಿಯೇ ಕಾರ್ಯ ಸಾಧುವೇ?**

ಈ ವಿಷಯವಾಗಿ ಬಹಳಷ್ಟು ಚರ್ಚೆ ಹಾಗೂ ಸಂಶೋಧನೆ ನಡೆದಿದ್ದು 'ಒಂದೇ ಏಟಿಗೆ ಎಲ್ಲಾ ಮುಗಿಸುವ' ಪದ್ಧತಿಯ ಬಗ್ಗೆ ತುಂಬಾ ಟೀಕೆಗಳು ಬಂದಿವೆ. ಈ ಪ್ರಕ್ರಿಯೆಯು ಮುಖ್ಯವಾಗಿ ಅರ್ಹತಾಪತ್ರ ಗಳಿಕೆಯ ಮೊದಲು ನಡೆಯುವುದರಿಂದ ಹಾಗೂ ನಂತರದಲ್ಲಿ ಏನೂ ಇಲ್ಲದಿರುವುದರಿಂದ ಶಿಕ್ಷಕರಿಗೆ ತಮ್ಮ ಅಧ್ಯಾಪನದ ಬಗ್ಗೆ ಚಿಂತನ–ಮನನಕ್ಕೆ ಯಾವುದೇ ಅವಕಾಶ ಇರುವುದಿಲ್ಲ. ಇಂತಹ ಪ್ರಚಲಿತ ಕಾರ್ಯಕ್ರಮಗಳು ತಮ್ಮದೇ ಬಲದಿಂದ ನಿಲ್ಲುವುದಿಲ್ಲವೆಂದೂ ಉದ್ದೇಶ ಸಾಧನೆಯಲ್ಲಿ ವಿಫಲವಾಗುವವೆಂದೂ ಅನುಭವವು ತೋರಿಸಿಕೊಟ್ಟಿದೆ. ತರಗತಿಯಲ್ಲಿ ಪಾಠ ಮಾಡುವ ನೈಜ ಅನುಭವ ಇಲ್ಲದ ಹೊರತು ಅಧ್ಯಾಪನದ ಕುರಿತಾದ ಉಪನ್ಯಾಸವಾಗಲಿ ಲಿಖಿತ ಸಾಹಿತ್ಯವಾಗಲಿ ಶಿಕ್ಷಕ ವಿದ್ಯಾರ್ಥಿಗೆ ಹೆಚ್ಚು ಪ್ರಯೋಜನಕಾರಿಯಾಗುವುದಿಲ್ಲ ಎಂಬುದು ಒಂದು ವಾದವಾದರೆ ತರಬೇತಿಯಲ್ಲಿನ ವಿಷಯಗಳ ಗುಣಮಟ್ಟ ಹಾಗೂ ಸ್ವಭಾವದ ದೋಷವೇ ಇದಕ್ಕೆ ಕಾರಣವೆಂದು ಇನ್ನೂ ಕೆಲವರು ವಾದ ಮಾಡುತ್ತಾರೆ. ಶಾಲೆಯಲ್ಲಿನ ಅನುಭವ ಇರಬೇಕಾದ ರೀತಿಯಲ್ಲಿ ಇಲ್ಲವೆಂದೂ ಅದನ್ನು ಉಪನ್ಯಾಸದೊಂದಿಗೆ ಸಂಪರ್ಕಿಸುವ ರೀತಿ ಸಮರ್ಪಕವಾಗಿಲ್ಲವೆಂದೂ ವಾದ ಮಾಡಲಾಗುತ್ತಿದೆ. ಶಿಕ್ಷಕರು ತಮ್ಮ ಅನುಭವಗಳನ್ನು ಹಂಚಿಕೊಳ್ಳಬೇಕು ಹಾಗೂ ಅವುಗಳ ಬಗ್ಗೆ ಯೋಚಿಸಬೇಕು. ಅಲ್ಲದೆ ಬೇರೆ ಚಟುವಟಿಕೆಗಳ ಮೂಲಕವೂ ಸೈದ್ಧಾಂತಿಕ ಆಲೋಚನೆಗಳ ಅಧ್ಯಯನ ಮಾಡುವ ಮೂಲಕವೂ ತಮ್ಮ ಯೋಚನೆಗಳನ್ನು ಹೊಳಪುಗೊಳಿಸಿ ವಿಸ್ತರಿಸಬೇಕು ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಸಮಗ್ರ ಶಿಕ್ಷಕ ತಯಾರಿ, ಮೌಲ್ಯ ಮಾಪನ, ಅರ್ಹತಾ ಪತ್ರ ನೀಡಿಕೆ ಹಾಗೂ ನಿರಂತರ ಕಲಿಕೆ (ಅಗತ್ಯವೆನಿಸಿದರೆ ಮೌಲ್ಯಮಾಪನ ಹಾಗೂ ಮರುಪರೀಕ್ಷೆ) ಯಂತೆಯೇ ಮರುಚೈತನ್ಯ ನೀಡುವ ಅವಧಿಬದ್ಧವಾದ ಸಂವಾದ–ಸಂವಹನದ ಅಗತ್ಯವನ್ನೂ ಮಾನ್ಯ ಮಾಡಲಾಗಿದೆ.

ತರಗತಿಯ ಅನುಭವ ಹಾಗೂ ಕಲ್ಪನಾಶೀಲ ಆಲೋಚನೆಗಳ ನೆಲೆಯಲ್ಲಿ ಶಿಕ್ಷಕ ತಯಾರಿ ಕಾರ್ಯಕ್ರಮವನ್ನು ವರ್ಗೀಕರಿಸಬಹುದಾಗಿದೆ. ಅಲ್ಲದೆ ಶಿಕ್ಷಕರು ಸೈದ್ಧಾಂತಿಕ ವಿಷಯಗಳ ಕುರಿತಾದ ಚರ್ಚೆಯನ್ನು ನಡೆಸಲು ಸಿದ್ಧರಿರಬೇಕಾಗುತ್ತದೆ.

**ಶಾಲೆಯ ಅನುಭವ ಹಾಗೂ ಶಿಕ್ಷಕರ ತಯಾರಿ:**

ಶಾಲೆಯ ಅನುಭವದ ಮೇಲಿನ ಹೆಚ್ಚಿನ ಒತ್ತು ಸ್ವಾಗತಾರ್ಹವೇ ಸರಿ; ಈ ಕುರಿತು ಕೆಲವು ಹೊಸ ಆಲೋಚನೆಗಳೂ ಧ್ವನಿಸಲ್ಪಟ್ಟಿವೆ. ಇವುಗಳಲ್ಲಿ ಕೆಲವು ಅರ್ಥಪೂರ್ಣವಾಗಿವೆಯಾದರೂ ಇನ್ನು ಕೆಲವು ಆಲೋಚನೆಗಳು ಯಶಸ್ಸಿನ ಸಾಧ್ಯತೆಯೂ ಸೇರಿದಂತೆ ಹಲವು ತತ್ವಗಳಿಗೆ ವಿರುದ್ಧವಾಗಿವೆ. ಉದಾಹರಣೆಗೆ, ಶಿಕ್ಷಕರು ಶಾಲೆಯ ಒಂದು ಅಂಗವೇ ಎಂಬಂತೆ ಆಗಿ ಶಿಕ್ಷಣವನ್ನು ಒಂದು ವೃತ್ತಿಯಾಗಿ ತೆಗೆದುಕೊಳ್ಳಬೇಕು, ವೈದ್ಯಕೀಯ ಕಾಲೇಜಿನ ಕಲಿಕೆಯಂತೆ ಶಿಕ್ಷಕರು ಶಾಲೆಯಲ್ಲಿನ ನೈಜ ಸನ್ನಿವೇಶಗಳಿಗೆ ತೆರೆದುಕೊಳ್ಳಬೇಕು ಎಂಬುದು ಉತ್ತಮ ಬೆಳವಣಿಗೆಯಾಗಿದೆ. ಇದು ಆಕರ್ಷಕವಾಗಿ ಕಾಣಿಸುತ್ತದೆ; ಆದರೆ ಈ ಕಾರ್ಯದ ಸ್ವರೂಪದಿಂದಾಗಿ ಇದು ಅಪಾಯಗಳನ್ನು ಒಳಗೊಂಡಿದೆಯಲ್ಲದೆ ಅನುಷ್ಠಾನದ ಅಸಾಧ್ಯತೆಗಳಿಂದಲೂ ಕೂಡಿದೆ. ಹಾಗಾಗಿ ಇಲ್ಲಿ ಕೊಡಲಾಗಿರುವ ಸನ್ನಿವೇಶದ ಹೋಲಿಕೆಯೂ ವಿಚಾರಶೀಲವಾದುದಲ್ಲ. ಶಿಕ್ಷಕ ಅಭ್ಯರ್ಥಿಗಳು ಶಾಲೆಗಳಲ್ಲಿಯೇ ಹೆಚ್ಚು ತರಬೇತಿಗಳಿಗೆ ತೆರೆದುಕೊಳ್ಳುವಂತೆ ಮಾಡುವ ಹಾಗೂ ತರಬೇತಿ ಅವಧಿಯ ಬಹು ಭಾಗವನ್ನು ಶಾಲೆಗೇ ವರ್ಗಾಯಿಸುವ ಮಾರ್ಗಗಳೇನು ಎಂಬ ಹುಡುಕಾಟವೂ ನಡೆದಿತ್ತು. ಸೇವಾವಧಿ ತರಬೇತಿಯ ಸಂಬಂಧವಾಗಿ ಮಾಡಲಾದ ಅನೇಕ ಪ್ರಯೋಗಗಳು ಸೇವಾಪೂರ್ವದ ತರಬೇತಿಗೂ ಈ ರೀತಿಯ ಹಲವಾರು ಮಾರ್ಗಗಳನ್ನು ನಿರ್ಮಿಸಿಕೊಟ್ಟಿವೆಯಾದರೂ ಅವುಗಳಲ್ಲಿ ಯಾವುದೂ ಪೂರ್ತಿಯಾಗಿ ವಿಕಾಸಗೊಂಡಿಲ್ಲ ಅಥವಾ

ಪ್ರಯೋಗಕ್ಕೂ ಒಳಪಟ್ಟಿಲ್ಲ. ಶಿಕ್ಷಣಾರ್ಥಿಗಳ ಹಾಗೂ ಉತ್ತಮ ಮಾರ್ಗದರ್ಶಕರ ಸಂಖ್ಯೆಯ ಸಂಬಂಧವಾಗಿಯೇ ಅಡಚಣೆಗಳು ಉಂಟಾಗಿವೆ. ಅದೇನೇ ಇರಲಿ, ಹೊಸ ಶಿಕ್ಷಕರ ತರಬೇತಿಯಲ್ಲಿನ ಸೇವಾಪೂರ್ವ ತರಬೇತಿಯ ಒಳಸೇವೆ ಅವಧಿಯನ್ನು ಹೆಚ್ಚಿಸಲಾಯಿತು; ಈ ಕುರಿತಾದ ಧ್ಯೇಯಗಳಿಗೆ ಮರುವ್ಯಾಖ್ಯಾನವನ್ನೂ ನೀಡಲಾಯಿತು. ಶಿಕ್ಷಕರ ತಯಾರಿ ಕುರಿತಾದ ಚರ್ಚೆ–ಸಂವಾದಗಳ ಒತ್ತಡದಿಂದ ಈ ಬದಲಾವಣೆಗಳಾದವು; ಆದರೆ ಹೊಸ ವ್ಯವಸ್ಥೆಯ ವಿನ್ಯಾಸವು ಚರ್ಚೆಯ ಮುಖ್ಯ ಆಶಯವನ್ನು ಒಳಗೊಳ್ಳಲೇ ಇಲ್ಲ.

ಶಿಕ್ಷಣಾರ್ಥಿಯು ಏನನ್ನು ಕಲಿಯಬೇಕಾಗಿದೆ ಎಂಬುದರ ಆಧಾರದಲ್ಲಿ ಶಾಲೆಯೊಳಗೆ ಕಾರ್ಯ ನಿರ್ವಹಣೆಯ ಕಾಲದಲ್ಲಿ ಆಕೆಯ ಪಾತ್ರ ಹಾಗೂ ಹೊಣೆಗಾರಿಕೆಗಳೇನು ಎಂಬುದರ ಬಗ್ಗೆ ಸಮರ್ಪಕ ಚಿಂತನ– ಮಂಥನ ಆಗಿಲ್ಲ. ಇದು ಈ ಕಾರ್ಯಕ್ರಮದ ಸಂರಚನೆಯ ಮೇಲೆ ಮಹತ್ತರ ಪ್ರಭಾವವನ್ನು ಬೀರಿದ್ದು ಕಾರ್ಯಕ್ರಮಕ್ಕೂ ಶಾಲೆಗೂ ಇರುವ ಸಂಬಂಧದ ಸ್ವರೂಪವನ್ನು ಬಾಧಿಸಿದೆ. ಇದು ಡಿಐಇಟಿ (DIET), ಶಿಕ್ಷಕ ತರಬೇತಿ ಕಾಲೇಜುಗಳು ಹಾಗೂ ಇತರ ಸಂಸ್ಥೆಗಳು ಶಾಲೆಗಳೊಂದಿಗೆ ಹೊಂದಿರುವ ಸಂಬಂಧವನ್ನೂ ಬಾಧಿಸುತ್ತದೆ ಅಲ್ಲದೆ ಎಲ್ಲೆಲ್ಲೂ ವ್ಯಾಪಿಸಿಕೊಂಡಿರುವ ಜ್ಞಾನದ ಶ್ರೇಣೀಕೃತ ವ್ಯವಸ್ಥೆಯ ಆಧಿಪತ್ಯದ ಮೇಲೆಯೂ ಪರಿಣಾಮ ಬೀರುತ್ತದೆ. ಶಿಕ್ಷಣಾರ್ಥಿಯು ಶಾಲೆಗೆ ಹೋಗಿ ಒಳಸೇವೆ ನಿರ್ವಹಿಸುವ ಅವಧಿಯ ಅನುಭವದಿಂದ ಶಿಕ್ಷಣಾರ್ಥಿಯೂ ಅವಳ ಕಾಲೇಜೂ ಅದನ್ನು ಕಲಿತು ಅರಗಿಸಿಕೊಳ್ಳಬೇಕು ಎಂಬುದು ನಿರೀಕ್ಷಿತ. ಆದರೆ ಆ ಶಾಲೆಯ ಶಿಕ್ಷಕ ವೃಂದದಲ್ಲಿ ಹಾಗೂ ವಿದ್ಯಾರ್ಥಿ ಸಮೂಹದಲ್ಲಿ, ಈ ಶಿಕ್ಷಣಾರ್ಥಿಗಳು ಶಾಲೆಯಲ್ಲಿ ಏನು ಮಾಡಬೇಕು ಹಾಗೂ ಈಗಾಗಲೇ ತಿಳಿದಿರುವಂತಹ ಹಾಗೂ ಸಮರ್ಪಕವೆಂದು ತಾವು ಭಾವಿಸಿರುವ ಕಾರ್ಯಗಳನ್ನೇ ಮಾಡಬೇಕು ಎಂದು ಅವರಿಗೆ ಕೇಳುವಂತಹ ಮನೋಭಾವನೆ ಸಹಾ ಕಂಡುಬರುತ್ತದೆ. ಜ್ಞಾನದ ಶ್ರೇಣೀಕೃತ ವ್ಯವಸ್ಥೆಯು ಶಿಕ್ಷಣಾರ್ಥಿಗಳ ಶಾಲೆಯಲ್ಲಿನ ಅನುಭವವು ಇದೇ ರೀತಿ ಇರಬೇಕು ಎಂದು ಪೂರ್ವನಿರ್ಧಾರ ಮಾಡುವುದಲ್ಲದೆ ಅದನ್ನು ಯಾಂತ್ರಿಕವನ್ನಾಗಿಯೂ ಮಾಡುತ್ತದೆ. ಇದರಿಂದ ಶಾಲೆಗಾಗಲಿ ಶಿಕ್ಷಣಾರ್ಥಿಯನ್ನು ಕಳಿಸುವ ಕಾಲೇಜಿಗಾಗಲಿ ಯಾವುದೇ ಉಪಯೋಗ ದೊರೆಯುವುದಿಲ್ಲ. ಶಾಲೆಯ ಕಷ್ಟಗಳೇನು ಎಂಬುದನ್ನು ತಿಳಿದು ಅವುಗಳನ್ನು ಪರಿಹರಿಸಲು ಪ್ರಯತ್ನಿಸುವ ಮನೋಭಾವ ಶಾಲೆಯ ಶಿಕ್ಷಕ ವೃಂದದವರಿಗಾಗಲಿ ತರಬೇತಿ ವಿದ್ಯಾರ್ಥಿಗಳಿಗಾಗಲಿ ಇರುವುದಿಲ್ಲ. ಸಂಸ್ಥೆಗಳ ನಡುವಿನ ಸಂವಾದಾತ್ಮಕ ಸಂಬಂಧ ಎಂಬುದರ ಸುಳಿವೇ ಇರುವುದಿಲ್ಲ.

ತಾತ್ವಿಕವಾಗಿ ಶಾಲೆಯೊಳಗಣ ಅನುಭವದಿಂದ ಹಾಗೂ ಒಂದು ಶಾಲೆಯಲ್ಲಿನ ಶಿಕ್ಷಕರನ್ನೂ ಮಕ್ಕಳನ್ನೂ ಹತ್ತಿರದಿಂದ ಅವಲೋಕಿಸುವುದರಿಂದ ಉಪಯೋಗವಾಗಬಹುದು. ಸಮಸ್ಯೆ ಏನೆಂದರೆ ಶಾಲೆಗಳನ್ನು ಆಯ್ಕೆ ಮಾಡುವುದು ಹಾಗೂ ಅವುಗಳನ್ನು ಈ ರೀತಿಯ ಕಾರ್ಯಕ್ರಮಕ್ಕೆ ಒಡಂಬಡಿಸುವುದು, ಅನೇಕ ಶಿಕ್ಷಕ–ವಿದ್ಯಾರ್ಥಿಗಳು ಒಂದೇ ಕಾಲಕ್ಕೆ ಒಂದೇ ಶಾಲೆಗೆ ದಾಳಿಯಿಟ್ಟು ಒಂದೇ ಕಾಲದಲ್ಲಿ ಎಲ್ಲಾ ತರಗತಿಗಳನ್ನೂ ಆಕ್ರಮಿಸಿಕೊಂಡು ಬಿಟ್ಟರೆ ಆಗುವ ಗೊಂದಲ ಬಹಳಷ್ಟು. ಯಾಕೆಂದರೆ ಈ ರೀತಿಯ ಕಾರ್ಯಕ್ರಮವನ್ನು ಮೇಲಿನವರು ಯಾರೋ ನಿಗದಿಪಡಿಸಿದ ದಿನ, ಶಾಲೆ ಹಾಗೂ ಶಿಕ್ಷಕ ವಿದ್ಯಾರ್ಥಿಗಳ ಸಂಖ್ಯೆಗಳ ಅನುಸಾರ ಮಾಡಲಾಗುತ್ತದೆ. ಎಲ್ಲಾ ತರಬೇತಿ ಅಭ್ಯರ್ಥಿಗಳೂ ಒಂದೇ ಕಾಲಕ್ಕೆ ಒಂದು ಶಾಲೆಗೆ ಹೋಗುವಂತೆ ಒಂದೆಡೆಯಿಂದ ನಿರ್ದೇಶಿಸಬೇಕಾದ ಅಗತ್ಯವೇನು? ಈ ಸಂದರ್ಭಗಳಲ್ಲಿ ಮಾರ್ಗದರ್ಶಿ ಶಿಕ್ಷಕರು ಹಾಗೂ ಶಾಲೆಯ ಮುಖ್ಯೋಪಾಧ್ಯಾಯರೊಡನೆ ಯಾವುದೇ ಸಂವಹನವೂ ನಡೆದಿರುವುದಿಲ್ಲವಾದ್ದರಿಂದ ಅವರುಗಳು ಹೆಚ್ಚಿನ ಸಿದ್ಧತೆಗಳನ್ನು ಮಾಡಿಕೊಂಡಿರುವುದಿಲ್ಲ. ಬಹಳಷ್ಟು ಸಂದರ್ಭಗಳಲ್ಲಿ ಕಾರ್ಯಕ್ರಮದ ದಿನ, ಕಾಲ, ಮಾಡಬೇಕಾದ ಚಟುವಟಿಕೆಗಳ ಸ್ವರೂಪ ಇತ್ಯಾದಿಗಳ ಬಗ್ಗೆ ಸಮಾಲೋಚನೆ ಮೊದಲೇ ಆಗಿರುವುದಿಲ್ಲ.

ಶಾಲೆಗಳ ಲಭ್ಯತೆಯ ಸಮಸ್ಯೆ ಹಾಗೂ ಈ ಕಾರ್ಯಕ್ರಮದಿಂದ ಶಾಲೆಗೆ ಏನು ಲಾಭ ಎಂಬುದು ಪರಸ್ಪರ ಸಂಬಂಧ ಹೊಂದಿವೆ. ಆದರೆ ಅವು ಸಮಸ್ಯೆಗೆ ಪೂರ್ಣ ಕಾರಣ ಅಲ್ಲ. ಈ ಕಾರ್ಯಕ್ರಮದಿಂದ ಶಾಲೆಗೆ ಲಾಭವಿಲ್ಲದೆ ಹೋದರೂ ಅವರು ಅವಕಾಶ ಮಾಡಿಕೊಂಡು ತರಬೇತಿ ಅಭ್ಯರ್ಥಿಗಳನ್ನು ಸೇರಿಸಿಕೊಳ್ಳಲು ಸಿದ್ಧರಿರುತ್ತಾರೆ, ಆದರೆ ಶಿಕ್ಷಣ ತರಬೇತಿ ಕಾಲೇಜುಗಳ ಅಪಾರ ಸಂಖ್ಯೆ ಹಾಗೂ ನಗರ ಪ್ರದೇಶದ ಶಾಲೆಗಳಲ್ಲಿ ಕೆಲಸ ಮಾಡಲು ಬಹುಮಂದಿ ಅಭ್ಯರ್ಥಿಗಳು ಕಾಯುತ್ತಿರುವುದು ಶಾಲೆಗಳ ಸದುದ್ದೇಶವನ್ನು ನಿಷ್ಫಲಗೊಳಿಸುತ್ತಿದೆ.

**ಪಠ್ಯಕ್ರಮದ ಘಟಕಗಳ ರಚನೆ:**

ತರಬೇತಿಯ ಅವಧಿ ಹಾಗೂ ಅದರ ಸಂರಚನೆ ಯಾವುದೇ ಇದ್ದರೂ ಸೇವಾಪೂರ್ವ ತಯಾರಿಗೆ ಮಹತ್ವದ್ದು ಎಂದು ಪರಿಗಣಿಸಲಾಗುವ ಘಟಕಗಳಲ್ಲಿ ಕೆಲವು ಅಗತ್ಯದ ವಿಷಯಗಳು ಸೇರಲೇಬೇಕು. ಒಂದು ತರಗತಿ ನಡೆಸಲು ಶಿಕ್ಷಕಿಗೆ ಯಾವ ರೀತಿಯ ತಯಾರಿ ಹಾಗೂ ಏನೆಲ್ಲ ಸಾಮರ್ಥ್ಯಗಳು ಇರಬೇಕು ಎಂಬುದರ ವಿವರಣೆ ಅದರಲ್ಲಿ ಇರಬೇಕು. ಶಾಲಾ ಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ ಶಿಕ್ಷಕರಿಗೆ ಈ ಸಾಮರ್ಥ್ಯ ಹಾಗೂ ಗುಣಗಳು ಇರಬೇಕು, ಆದರೆ ಬೇರೆ ಬೇರೆ ತರಗತಿಗಳಿಗೆ ಅವುಗಳ ಪ್ರಮಾಣ ಹಾಗೂ ಸ್ವಭಾವ ಬದಲಾಗಬಹುದು. ಮೊದಲು ನಾವು ಈ ಗುಣಗಳುಳ್ಳ ಘಟಕಗಳು ಯಾವುವು ಎಂದು ಪರಿಶೀಲಿಸೋಣ; ಆಮೇಲೆ ಪ್ರಯೋಗದ ಬಗ್ಗೆ ಯೋಚನೆ.

ಅತ್ಯಂತ ಮುಖ್ಯವಾಗಿ ಶಿಕ್ಷಕ ಮಕ್ಕಳ ಹಿನ್ನೆಲೆ, ಆಶೋತ್ತರಗಳು, ನಂಬಿಕೆಗಳು, ಸಂಸ್ಕೃತಿ ಹಾಗೂ ಅವರ ಸ್ವಭಾವ-ಸ್ವರೂಪಗಳು ಇತ್ಯಾದಿಗಳನ್ನು ಅರ್ಥಮಾಡಿಕೊಂಡು ಗೌರವಿಸಬೇಕು. ಅವರ ಭಾಷೆಯನ್ನು ತಿಳಿದು ಬಳಸಬೇಕು, ಅವರ ಹಾಗೂ ಅವರ ಸಮುದಾಯದವರ ಜ್ಞಾನವನ್ನು ಗೌರವಿಸಬೇಕು. ಅವರ ಆದರ್ಶ ವ್ಯಕ್ತಿ ಯಾರು ಎಂದು ತಿಳದುಕೊಳ್ಳಬೇಕು; ಆ ಸಾಲಿಗೆ ಇನ್ನಷ್ಟು ಮಂದಿಯನ್ನು ಸೇರಿಸಲು ಒತ್ತಾಸೆ ನೀಡಬೇಕು.

ಸ್ವಾಭಾವಿಕವಾಗಿ ಇದರ ಅರ್ಥ ಏನೆಂದರೆ ವಿದ್ಯಾರ್ಥಿಗಳ ಜೀವನದಲ್ಲಿ ಶಿಕ್ಷಣದ ಪಾತ್ರ ಹಾಗೂ ಅರ್ಥ ಏನು ಎಂದು ತಿಳಿದುಕೊಳ್ಳುವುದೇ ಆಗಿದೆ. ಅದರೊಂದಿಗೆ ಅದು ನಮ್ಮೆಲ್ಲರ ಜೀವನದಲ್ಲಿಯೂ ಹಾಗೂ ಭಾಗಶಃ ನಮ್ಮ ಪ್ರಜಾತಾಂತ್ರಿಕ ಮಾನವ ಸಮಾಜದಲ್ಲಿಯೂ ಅದರ ಪಾತ್ರವನ್ನು ಅರ್ಥಮಾಡಿಕೊಳ್ಳುವುದರ ಕುರಿತಾಗಿದೆ. ಸಂವಿಧಾನದ ಪ್ರಸ್ತಾವನೆಯಲ್ಲಿ ನೀಡಲಾದ ಬದ್ಧತೆಗಳನ್ನು ಭಾರತೀಯ ಸಂದರ್ಭದಲ್ಲಿ ತಿಳಿದುಕೊಂಡು ಅವುಗಳನ್ನು ಶಾಲೆಯ ಆಗು-ಹೋಗುಗಳಲ್ಲಿ ಸಮ್ಮಿಲಿತಗೊಳಿಸಲು ಯತ್ನಿಸಬೇಕು. ತೆರೆದುಕೊಳ್ಳುವಿಕೆ ಹಾಗೂ ಅವಕಾಶಗಳ ವಿಷಯದಲ್ಲಿ ಮಕ್ಕಳ ನಡುವೆ ಇರುವ ಅಪಾರವಾದ ವ್ಯತ್ಯಾಸಗಳನ್ನು ಅರ್ಥಮಾಡಿಕೊಂಡು ಎಲ್ಲರಿಗೂ ಸಮಾನವಾದ ಹಕ್ಕು-ಅವಕಾಶಗಳನ್ನು ಒದಗಿಸಬೇಕಾದ ಅಗತ್ಯವನ್ನು ಮನಗಾಣಬೇಕು.

ಮನುಷ್ಯರು ಹೇಗೆ ಕಲಿಯುತ್ತಾರೆ ಹಾಗೂ ಮುಖ್ಯವಾಗಿ ಆ ವಯೋಮಾನದ ಮಕ್ಕಳು ಹೇಗೆ ಕಲಿಯುತ್ತಾರೆ ಮತ್ತು ಅವರ ನಡೆನುಡಿ ಹೇಗಿರುತ್ತದೆ ಎಂದು ತಿಳಿದುಕೊಳ್ಳುವುದೇ ಮೂರನೇ ಘಟಕ. ಕಲಿಯುವುದು ಅಂದರೆ ಏನು ಎಂದು ಅರ್ಥಮಾಡಿಕೊಳ್ಳುವುದೂ ಇದರಲ್ಲಿ ಸೇರುತ್ತದೆ. ಉದಾಹಣೆಗೆ ಕಲಿಯುವುದು ಎಂದರೆ ನೆನಪಿಟ್ಟುಕೊಳ್ಳುವ ಸಾಮರ್ಥ್ಯ ಅಥವಾ ನಿಯಮಗಳನ್ನು ಪಾಲಿಸುವ ಸಾಮರ್ಥ್ಯ ಮಾತ್ರವೇ ಅಲ್ಲ. ಪುಸ್ತಕದಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯವಾಗಲಿ, ಪರೀಕ್ಷೆಯ ಸಮಯದಲ್ಲಿ ಅದಕ್ಕನುಸಾರವಾಗಿ ಉತ್ತರಿಸುವ ಸಾಮರ್ಥ್ಯವಾಗಲಿ 'ಕಲಿಯುವುದು' ಅಲ್ಲ. ಆದ್ದರಿಂದ ಏನನ್ನು ಕಲಿಯಬೇಕು ಎಂಬುದರ ಜ್ಞಾನ ಇರಬೇಕು ಮತ್ತು ಶಾಲಾ ತರಗತಿಯಲ್ಲಿ ಅದು ಸಂಭವಿಸುತ್ತಿದೆಯೇ ಎಂಬುದನ್ನು ತೀರ್ಮಾನಿಸುವಂತಹ ತಿಳಿವಳಿಕೆ ಇರಬೇಕು. ಈ ವಿಷಯದಲ್ಲಿ ಶಿಕ್ಷಣ ನೀತಿ ಹಾಗೂ ಪಠ್ಯಕ್ರಮದ ದಾಖಲೆಗಳಲ್ಲಿ ಬಹಳಷ್ಟು ಉಲ್ಲೇಖ ಆಗಿದೆ. ಆದರೆ ಈ ವಿಚಾರವನ್ನು ತಾತ್ವಿಕವಾಗಿ ಕಲ್ಪಿಸಿ ಮೂರ್ತರೂಪಕ್ಕೆ ಇಳಿಸುವುದು ಬಲು ಕಷ್ಟ; ಅಂತೆಯೇ ಕಾರ್ಯರೂಪಕ್ಕೆ ತರುವುದು ಇನ್ನೂ ಕಷ್ಟ.

ನಾಲ್ಕನೆಯ ಘಟಕ ಮಾಡಬೇಕಾದ ಕಾರ್ಯಕಲಾಪ ಏನೆಂದು ತಿಳಿದುಕೊಳ್ಳುವುದು, ಅಂದರೆ ಅದನ್ನು ಕಲಿಯಬೇಕಾದ ಪ್ರಸ್ತುತತೆ ಏನು, ಆ ವಿಷಯದ ಸ್ವಭಾವ ಏನು ಎಂದು ತಿಳಿಯುವುದು; ಆ ವಿಷಯದ ಮೂಲ ಚೌಕಟ್ಟು ಹಾಗೂ ಅದರ ಸೂಕ್ಷ್ಮ ವಿವರಗಳ ಬಗ್ಗೆ ಆತ್ಮವಿಶ್ವಾಸ ಹೊಂದಿರುವುದು ಅಗತ್ಯ. ವಿಷಯದ ಕುರಿತು ಭಯವಾಗಲಿ, ಆತಂಕವಾಗಲಿ ಅಥವಾ ನನಗೆ ಇದೆಲ್ಲಾ ಲೀಲಾಜಾಲ ಎಂಬ ಜಂಬದಿಂದ ಬರುವ ಅಹಂಕಾರವಾಗಲಿ ಇರದೆ ಅದನ್ನು ಸಂತೋಷದಿಂದಲೂ ಕುತೂಹಲದಿಂದಲೂ ಗೌರವದ ಮನೋಧರ್ಮದಿಂದಲೂ ಸ್ವೀಕರಿಸಬೇಕು. ಒಂದು ವಿಷಯದ ಪರಿಕಲ್ಪನೆಗಳನ್ನು ಹಾಗೂ ಅದರ ಸೂಕ್ಷ್ಮವಿವರಗಳನ್ನು ಅರಿಯುವ ಮಕ್ಕಳ ಪ್ರಯಾಣದ ಹೆಜ್ಜೆಗುರುತುಗಳನ್ನು ತಿಳುವಳಿಕೆಯಿಂದ ಹಾಗೂ ಸಹಾನುಭೂತಿಯಿಂದ ಗುರುತಿಸುವ ಸಾಮರ್ಥ್ಯವಿರಬೇಕು. ಪ್ರಸ್ತುತ ವ್ಯವಸ್ಥೆಯು ರೂಪಿಸಿರುವ ಇಂದಿನ ಶಿಕ್ಷಕಿಯು ಇದರಿಂದ ಬಲು ದೂರವೇ ಉಳಿದಿದ್ದಾಳೆ. ಇಂದಿನ ವ್ಯವಸ್ಥೆಯಲ್ಲಿ ಹಲವು ಶಿಕ್ಷಕಿಯರು ತರಗತಿಯಲ್ಲಿ ಹಲವಾರು ವಿಷಯಗಳನ್ನು ಬೋಧಿಸುವುದರಿಂದ ಇದೆಲ್ಲವನ್ನೂ ತರಬೇತಿಯ ಅವಧಿಯೊಳಗೆ ಎಲ್ಲಾ ಹಂತಗಳಲ್ಲಿಯೂ ಕಾರ್ಯರೂಪಕ್ಕೆ ತರುವುದು ಕಷ್ಟದ ಮಾತೇ ಸರಿ. ಅವರಲ್ಲಿ ವಿಷಯದ ಕುರಿತಾದ ಬೇಸರವನ್ನೂ ಭಯವನ್ನೂ ಹೋಗಲಾಡಿಸಿ ಹುಡುಕಾಟದ ಮನೋಭಾವವನ್ನು ಹಾಗೂ ಸಂತೋಷವನ್ನು ಬೆಳೆಸುವುದು ಹೇಗೆ?

**ಮಕ್ಕಳ ಕಲಿಕೆಗೆ ಇವೆಲ್ಲದರ ಬಳಕೆ:**

ಕೊನೆಯ ಆದರೆ ಮಹತ್ವದ ಘಟಕವೇ ಇವೆಲ್ಲವನ್ನೂ ತರಗತಿಯಲ್ಲಿ ಮಕ್ಕಳೊಡನೆ ಬಳಸುವುದು. ಜ್ಞಾನವನ್ನು ಮಂಡಿಸುವುದಕ್ಕೆ ಮಕ್ಕಳಲ್ಲಿ ಆಸಕ್ತಿ ಮೂಡಿಸಿ ಅವರ ಮನಸ್ಸನ್ನು ಹಿಡಿದಿರಿಸಿ, ಅವರ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಅವರ ಮಧ್ಯೆ ಅರ್ಥಪೂರ್ಣ ಸಂವಹನವನ್ನು ಏರ್ಪಡಿಸುವ ಸಾಮರ್ಥ್ಯ ಶಿಕ್ಷಕಿ ಅಭ್ಯರ್ಥಿಗೆ ಇರಬೇಕಾಗುತ್ತದೆ. ಮಕ್ಕಳು ಅರಳುತ್ತಿರುವ ಅಮಾಯಕ ಹೂಮೊಗ್ಗುಗಳು ಅಥವಾ ತಿದ್ದಿ-ತೀಡಿ ಸುಂದರ ಆಕೃತಿಗಳಾಗಿ ರೂಪಿಸಬೇಕಾಗಿರುವ ಆವೆಮಣ್ಣಿನ ಮುದ್ದೆಗಳು ಎಂಬುದು ಒಂದೆಡೆಯಾದರೆ ಅವುಗಳು ಕಾಟಕೊಟ್ಟು ಅಶಿಸ್ತನ್ನು ಹರಡುವ ದುಷ್ಟ ರೌಡಿಗಳ ಪುಟಾಣಿ ರೂಪಗಳು ಎಂಬ ಪೂರ್ವಾಗ್ರಹ ಇನ್ನೊಂದೆಡೆ. ಇವೆರಡರ ಮಧ್ಯೆ ಸಮತೋಲನ ಇಟ್ಟುಕೊಳ್ಳಬೇಕಾಗುತ್ತದೆ. ತರಗತಿಯನ್ನು ಒಂದು ಸಂವಾದದ ಸ್ಥಳವನ್ನಾಗಿ ಮಾಡಿರಿ. ಅವರಲ್ಲಿ ಒಳಿತು ಕೆಡುಕುಗಳ ಕುರಿತಾದ ಅರಿವನ್ನು ಉಂಟು ಮಾಡಿರಿ; ಆದರೆ ಇದನ್ನು ಒತ್ತಾಯದಿಂದ ಮಾಡುತ್ತಿದ್ದೀರಿ ಎಂಬ ಭಾವನೆಗೆ ಅವಕಾಶ ಕೊಡದಿರಿ. ಭಾವನೆಗಳು ಹಾಗೂ ಮೌಲ್ಯಗಳನ್ನು ಅವರು ಮೈಗೂಡಿಸಿಕೊಳ್ಳುವಂತಹ ವೈಚಾರಿಕ ನೆಲೆಯ ಅರಿವನ್ನು ಮೂಡಿಸಿ.

ಇದು ಸಮಗ್ರವಾಗಿದೆ, ಎಲ್ಲರೂ ಈ ಬಗ್ಗೆ ಆಡುತ್ತಾರೆ, ಉಲ್ಲೇಖಿಸುತ್ತಾರೆ. ಆದರೆ ಸಂಪೂರ್ಣವಾಗಿ ಅಲ್ಲದಿದ್ದರೂ, ಭಾಗಶಃ ಕೂಡ ಜಾರಿ ಮಾಡುವುದಕ್ಕೆ ಅಸಾಧ್ಯವಲ್ಲದಿದ್ದರೂ, ಬಲು ಕಷ್ಟಕರವಾಗಿದೆ. ಕಲಿಯುವವರೊಳಗೆ ಮಾತ್ರವಲ್ಲ ತಮ್ಮೊಳಗೂ

ಸಹಾ ಕಲಿಕೆಯ ಕುರಿತಾದ ಸಂವಾದವನ್ನು ಕಟ್ಟಿಬೆಳೆಸುವುದಕ್ಕೆ ಶಿಕ್ಷಕರೇ ಅವಶ್ಯಕ ಘಟಕವೆಂಬುದು ಸದಾಕಾಲ ಪ್ರಸ್ತುತವಾಗಿರುತ್ತದೆ. ಇಲ್ಲಿ ಹೇಳಲಾದ ಸಾಮರ್ಥ್ಯಗಳು ಕೆಲವು ಶಿಕ್ಷಕರಿಗೆ ಮಾತ್ರವೇ ಅಲ್ಲ–ಎಲ್ಲಾ ಶಿಕ್ಷಕರಿಗೂ ಅನ್ವಯವಾಗುತ್ತದೆ. ಅವರು ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಮಾತ್ರವಲ್ಲದೆ ಬಹುತೇಕ ಎಲ್ಲರಿಗೂ ಕಲಿಸುವ ಸಾಮರ್ಥ್ಯ ಹೊಂದಿರಬೇಕು.

**ಕಲಿಕಾರ್ಥಿಯಾಗಿ ಶಿಕ್ಷಕಿ ಎಂಬ ಅಭಿಮತ ಹಾಗೂ ಆಕೆಯ ನಿರೀಕ್ಷಿತ ಪಾತ್ರ:**

ಶಿಕ್ಷಕರ ತಯಾರಿಯು ಯಾವಾಗಲೂ ಒಂದು ಮಟ್ಟದಲ್ಲಿ ಸೋಲುವ ಸಮರವೇ ಆಗಿದೆ. ಎಲ್ಲಾ ಹೊರೆಯನ್ನೂ ಶಿಕ್ಷಕಿಯ ಮೇಲೆ ಹೊರಿಸಿ, ಅದಕ್ಕಾಗಿ ಅವಳು ಸಿದ್ಧತೆ ಮಾಡಿಕೊಳ್ಳಬೇಕು ಎಂದು ನಿರೀಕ್ಷೆ ಮಾಡುವ ಆಸೆ ಒಂದೆಡೆಯಾದರೆ ಅಷ್ಟರಿಂದ ಹೆಚ್ಚಿನದೇನನ್ನೂ ನಿರೀಕ್ಷೆ ಮಾಡಲಾಗದು ಎಂಬ ಮನೋಧರ್ಮ ಇನ್ನೊಂದೆಡೆ. ಶಿಕ್ಷಕರ ತಯಾರಿ ಹಾಗೂ ತರಬೇತಿಗೆ ಅರ್ಥವೇ ಇಲ್ಲ ಎಂದು ವಾದಿಸುವ ಸಿನಿಕರು ಇದಕ್ಕೆ ಮಾಡುವ ಖರ್ಚನ್ನು ಇನ್ನಷ್ಟು ಕಡಿಮೆ ಮಾಡುವಂತೆ ಒತ್ತಾಯಿಸುತ್ತಿದ್ದಾರೆ. ಹಣವನ್ನು ನೇರವಾಗಿ ಮಕ್ಕಳ ಮೇಲೆಯೇ ವಿನಿಯೋಗಿಸುವಂತೆ ಅವರು ಹೇಳುತ್ತಾರೆ. ಏನೇ ಮಾಡಿದರೂ ಶಿಕ್ಷಕರನ್ನು ಬದಲಾಯಿಸಲು ಸಾಧ್ಯವಿಲ್ಲ; ವಿದ್ಯಾರ್ಥಿಗಳೊಂದಿಗೆ ಬೆರೆತು ಅವರು ಕೊಡುವ ಮಾಹಿತಿಯನ್ನೂ ಒಳಗೊಂಡಂತೆ ತಮ್ಮದೇ ಆದ ಬೋಧನಾ ಕಲಿಕಾ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವುದಿಲ್ಲ ಎಂಬುದು ಅವರ ವಾದ. ಅವರಿಗೆ ಬೇಕಾಗಿರುವುದು ಕೆಲವು ಸೂಚನೆಗಳು ಹಾಗೂ ಸ್ಪಷ್ಟವಾದ ನಿರ್ದೇಶನಗಳು ಎನ್ನುತ್ತಾರೆ. ಆದರೆ ಕನಸುಗಾರರು ಮಾತ್ರ ತದ್ವಿರುದ್ಧ ನಿಲುವಿನವರು; ಆದರೆ ಪರಿಸ್ಥಿತಿ ಭೀಕರವಿದೆ ಎಂದು ಎರಡೂ ಕಡೆಯವರು ಒಪ್ಪಿಕೊಳ್ಳುತ್ತಾರೆ ಹಾಗೂ ಇಬ್ಬರೂ ಶಿಕ್ಷಕರನ್ನೇ ದೂರುತ್ತಾರೆ. ಯಾವುದೇ ಸೂಕ್ಷ್ಮ ಸ್ವರೂಪದ ವಿಶ್ಲೇಷಣೆಯಿಂದಲೂ ಪ್ರಸ್ತುತದ ವ್ಯವಸ್ಥೆಯನ್ನು ಸರಿಪಡಿಸುವ ಹೋರಾಟ ಸಾಧ್ಯವಿಲ್ಲದ ಸ್ಥಿತಿ ಇದೆ. ಇಡಿಯ ಶಿಕ್ಷಕರ ತಯಾರಿ–ಅದರಲ್ಲೂ ಮುಖ್ಯವಾಗಿ ಸೇವಾಪೂರ್ವ ಶಿಕ್ಷಕ ತರಬೇತಿಯು, ನಾವು ಶಿಕ್ಷಕರನ್ನು ಹೇಗೆ ಅರ್ಥಮಾಡಿಕೊಂಡಿದ್ದೇವೆ ಮತ್ತು ಮಕ್ಕಳಿಗೆ ಕಲಿಸಲು ಅರ್ಹತೆ ಇರುವ ವ್ಯಕ್ತಿಗಳಾಗಿ ನೋಡುತ್ತೇವೆಯೇ ಎಂಬುದನ್ನು ಆಧರಿಸಿದೆ. ಅವರ ಸಾಮರ್ಥ್ಯವನ್ನು ಹೇಗೆ ಹೆಚ್ಚಿಸುವುದು ಸಾಧ್ಯ ಮತ್ತು ಅದನ್ನು ಮಾಡುವುದು ಎಂತು ಎಂಬುದರ ಮೇಲೆಯೂ ಈ ದೃಷ್ಟಿಕೋನವು ಪ್ರಭಾವ ಬೀರುವುದು.

ಒಂದೆಡೆ ಶಿಕ್ಷಕರು ದೇವರಂತೆ ಸರ್ವಶಕ್ತರು ಎಂಬಂತಹ ಹಾಗೂ ಇನ್ನೊಂದೆಡೆ ಅವರು ಒಂದು ಸಮುದಾಯವಾಗಿ ಹಾಗೂ ವೈಯಕ್ತಿಕವಾಗಿ ತಿರಸ್ಕಾರಕ್ಕೂ ಅಗೌರವಕ್ಕೂ ಪಾತ್ರರಾಗಿರುವಂತಹ ಎರಡು ರೀತಿಯ ಪರಸ್ಪರ ವಿರುದ್ಧವಾದ ಅತಿರೇಕದ ದೃಷ್ಟಿಕೋನಗಳಿಂದಾಗಿ ವ್ಯವಸ್ಥೆಯೊಂದಿಗೆ ಶಿಕ್ಷಕರ ಹೊಕ್ಕು ಬಳಕೆಯ ಸ್ವರೂಪ ಗೊಂದಲಮಯವಾಗಿದೆ. ಅವರನ್ನು ತಯಾರಿ ಮಾಡುವ ಕಾರ್ಯಕ್ರಮದ ದಾರಿ ಮತ್ತು ಗುರಿ– ಎರಡರ ಬಗ್ಗೆಯೂ ಸ್ಪಷ್ಟತೆ ಇರಬೇಕು. ಶಿಕ್ಷಕರು (ಹಾಗೂ ಶಿಕ್ಷಕರ ತರಬೇತುದಾರರು) ಸದಾ ಕಲಿಯುವವರೇ ಆಗಿರುತ್ತಾರೆ ಎಂಬ ತಿಳಿವಳಿಕೆಯ ನೆಲೆಯಲ್ಲಿ ಈ ಕಾರ್ಯಕ್ರಮ ಇರಬೇಕೆ? ಅವರು ಭಿನ್ನವಾದ ವಿಧಾನಗಳನ್ನು ಹಾಗೂ ತಂತ್ರಗಳನ್ನು ಬಳಸಬಹುದಾದರೂ ಮೇಲೆ ಉಲ್ಲೇಖಿಸಿದಂತೆ ಜೀವನ, ಸಮಾಜ, ಕಲಿಕೆ ಹಾಗೂ ವಿದ್ಯೆಯ ಕುರಿತಾದ ಅರಿವಿನ ಆಧಾರದಲ್ಲಿ ಅಂತಹ ವಿಧಾನ ಹಾಗೂ ತಂತ್ರಗಳನ್ನು ತಾವೇ ರೂಪಿಸಿಕೊಂಡು ಬೆಳವಣಿಗೆಯನ್ನು ಪಡೆಯಬೇಕೆ; ಬದಲಾಗಿ ಪೂರ್ವನಿರ್ಧಾರಿತವಾದ, ವಿವರಗಳಿಂದ ಕೂಡಿದ ಕಾರ್ಯಕ್ರಮ ಒಂದನ್ನು, ಬೇರಾವುದೇ ಬದಲಾವಣೆಗೂ, ಹೊಂದಾಣಿಕೆಗೂ ಅವಕಾಶವಿಲ್ಲದೆ ಚಾಚೂ ತಪ್ಪದೆ ಪಾಲಿಸುವಂತೆ ಮಾಡಬೇಕೆ?

ಈ ವಿಚಾರವು ನಮ್ಮನ್ನು ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಸ್ವರೂಪದತ್ತ ಕೊಂಡೊಯ್ಯುತ್ತದೆ. ಅಧ್ಯಾಪನವೆಂಬುದು ಬರೇ ಗಣಿತದ ಸೂತ್ರ ಅಲ್ಲವೆಂದಾದರೆ, ಶಿಕ್ಷಣವೆಂಬುದು ಸಂವಾದಾತ್ಮಕವಾದ ಪ್ರಕ್ರಿಯೆ ಹೌದಾದರೆ, ಶಿಕ್ಷಕಿಯೂ ಕಲಿಯುವ ಪ್ರಕ್ರಿಯೆಯಲ್ಲಿ ತೊಡಗಿದಾಗ ಮಾತ್ರ ಮಕ್ಕಳು ಕಲಿಯುತ್ತಾರೆ ಎಂದಾದರೆ ನಾವು ಹೇಳುವ ವಿಷಯವು ಈ ಪ್ರಕ್ರಿಯೆಗಳಲ್ಲಿ ಒಳಗೊಳ್ಳಬೇಕು. ಮಕ್ಕಳಲ್ಲಿ ಇರುವಂತಹ ಕಲಿಕೆಯ ಮನೋಭಾವವನ್ನು ಶಿಕ್ಷಕರೂ ಹೊಂದಿರಬೇಕಾಗುತ್ತದೆ. ಅವರಿಗೆ ಏನನ್ನೂ ಹೇಳುವ ಅಗತ್ಯವಿಲ್ಲ ಎಂಬುದಲ್ಲ; ಅವರಿಗಿಂತ ಹೆಚ್ಚು ತಿಳಿದವರೊಂದಿಗಿನ ಹೊಕ್ಕು ಬಳಕೆಯಿಂದ ಕಲಿಯಬೇಕಿಲ್ಲ ಎಂದೂ ಅಲ್ಲ. ನಾವಿಲ್ಲಿ ರಚನಾತ್ಮಕ ಕಲಾವಿದನ ಬಗ್ಗೆಯೋ ಸ್ವನಿರ್ಮಿತ ಶಿಕ್ಷಕ ಕಾರ್ಯಕ್ರಮದ ಬಗ್ಗೆಯೋ ಮಾತನಾಡುತ್ತಿಲ್ಲ. ಇವೆಲ್ಲದರ ನಡುವೆ ಇರಬೇಕಾದ ಒಂದು ಸಮತೋಲನದ ಬಗ್ಗೆ ಮಾತನಾಡುತ್ತಿದ್ದೇವೆ. ಯೋಚಿಸುವ, ಪ್ರತಿಕ್ಷಣವೂ, ಪ್ರತಿಯೊಂದರಲ್ಲಿಯೂ ಹೊಸ ಕೆಲಸಗಳೂ/ಸನ್ನಿವೇಶಗಳು/ವಿಧಾನಗಳು ಹಾಗೂ ಚಟುವಟಿಕೆಗಳಲ್ಲಿ ಹೊಸ ಯುಕ್ತಿಗಳನ್ನೂ ತಂತ್ರಗಳನ್ನೂ ಸೃಷ್ಟಿಸುವ ಶಿಕ್ಷಕಿ ನಮಗೆ ಬೇಕಾಗಿದ್ದಾಳೆ. ಇದರ ವೈರುಧ್ಯವೇ ಕಲಿಯಲು ಇಷ್ಟಪಡದಿರುವ, ಪ್ರಯತ್ನಶೀಲಳಾಗಲು ಮನಸ್ಸಿಲ್ಲದ, ಸ್ವಂತ ಆಲೋಚನೆಗಳಿಲ್ಲದ ಹಾಗೂ ಕುತೂಹಲವೂ ಇಲ್ಲದ ಶಿಕ್ಷಕರು. ಅಂತೆಯೇ ಅಧ್ಯಾಪನ–ಅಧ್ಯಯನಕ್ಕೆ ಸೈದ್ಧಾಂತಿಕ ಚೌಕಟ್ಟು ರೂಪಿಸುವುದು ಹಾಗೂ ಶಾಲೆ ಮತ್ತು ಮಕ್ಕಳು ಅನುಭವಿಸಿ ಅರಿವನ್ನು ಪಡೆಯುವ ಪದ್ಧತಿಯ ನಡುವೆಯೂ ಸಮತೋಲನ ಅಗತ್ಯವಾಗಿದೆ. ಹಾಗೆಯೇ ಇನ್ನೊಂದು ವಾದ– ಶಿಕ್ಷಕರಿಗೆ ಸಿದ್ಧಾಂತಗಳ ಅಗತ್ಯವಿಲ್ಲ. ಅದರಿಂದ ಯಾವ ಉಪಯೋಗವೂ ಇಲ್ಲ; ಅವರಿಗೆ ಬೇಕಾಗಿರುವುದು ವಿಭಿನ್ನ ರೀತಿಯ ಮಕ್ಕಳನ್ನು ನಿಭಾಯಿಸುವುದಕ್ಕೆ ಸಿದ್ಧಪಡಿಸಿರುವ ವಿವಿಧ ರೀತಿಯ ಕ್ರಮಗಳು ಹಾಗೂ ವಿವಿಧ ಸನ್ನಿವೇಶ ಮತ್ತು ಪರಿಸ್ಥಿತಿಯನ್ನು ಎದುರಿಸಲು ಅವರು ಏನು ಮಾಡಬೇಕು ಎಂದು ನಿರ್ದೇಶನ ನೀಡುವ ಸೂತ್ರಗಳು. ಇದು ಸಿದ್ಧಾಂತವನ್ನು ತಪ್ಪಾಗಿ ಹಾಗೂ ಅಸಮಂಜಸವಾಗಿ ಅರ್ಥಮಾಡಿಕೊಂಡಿದ್ದನ್ನು ಸೂಚಿಸುತ್ತದೆ; ಹಾಗೂ ಮಾಹಿತಿಗಳನ್ನು ನೆನಪಿಟ್ಟುಕೊಳ್ಳುವುದೇ ಎಲ್ಲವನ್ನೂ ತಿಳಿದಿರುವುದಕ್ಕೆ ಸಮ ಎಂದು ಭಾವಿಸಿ ಅದು ಸಿದ್ಧಾಂತವನ್ನು ತಿಳಿದಂತೆಯೇ ಎಂಬ ಮನೋಭಾವವನ್ನು ಸೂಚಿಸುತ್ತದೆ. ತಾನು ನಂಬುವ ತತ್ವಗಳಿಗೆ ತನ್ನ ಕ್ರಿಯೆಗಳು ಅನುಗುಣವಾಗಿರಬೇಕೆಂಬುದನ್ನು ಸೇವಾಪೂರ್ವ ತರಬೇತಿಯ ಪ್ರಕ್ರಿಯೆಯೂ ಅದರ ಕಾರ್ಯಾಚರಣೆಯೂ ಗಮನದಲ್ಲಿ

ಇರಿಸಿಕೊಳ್ಳಬೇಕಲ್ಲದೆ ತತ್ವಗಳು ಬರೇ ಪ್ರದರ್ಶಿಸುವುದಕ್ಕಲ್ಲ– ಕಾರ್ಯಕ್ರಮದ ಪ್ರತಿಯೊಂದು ಘಟಕದಲ್ಲಿಯೂ ಆಚರಣೆಗೆ ಇರುವಂತಹದೆಂದು ತಿಳಿಯಬೇಕು.

**ಇಷ್ಟೆಲ್ಲಾ ಕಾಲೇಜುಗಳು ನಮಗೆ ಬೇಕೇ?**

ಸೇವಾಪೂರ್ವ ಅರ್ಹತಾ ಪತ್ರದ ಉದ್ದೇಶ ಮತ್ತು ಅರ್ಥ ಏನು ಎಂಬುದು ಇನ್ನೊಂದು ಮಹತ್ವದ ವಿಚಾರ. ಶಿಕ್ಷಕರ ತರಬೇತಿ ಕಾಲೇಜಿನಲ್ಲಿ ಏನೆಲ್ಲ ಸಂಭವಿಸುತ್ತದೆಯೋ ಅಥವಾ ಸಂಭವಿಸದೇ ಇರುತ್ತದೆಯೋ –ಅದರ ಮೇಲೆಲ್ಲಾ ಈ ಅರ್ಹತಾಪತ್ರ ಪರಿಣಾಮ ಬೀರುತ್ತದೆ. ಹಾಗೂ ಅಲ್ಲಿ ಏನು ಕಲಿಸಲಾಗುವುದೋ ಹಾಗೂ ಏನು ಕಲಿಯಲಾಗುವುದೋ ಅವುಗಳ ಮೌಲ್ಯಮಾಪನದ ಮೇಲೂ ಪರಿಣಾಮ ಬೀರುತ್ತದೆ. ಆ ತರಗತಿಯೊಳಗಿನ ಕಲಾಪಗಳು ಅಭ್ಯರ್ಥಿಗೆ ಎಷ್ಟು ಬೆಲೆಯುಳ್ಳದ್ದು ಎಂಬುದನ್ನು ಅರಿಯಲು ಈ ಅರ್ಹತಾ ಪತ್ರವೇ ಆಧಾರ. ನಿರ್ದಿಷ್ಟ ಕಾಲೇಜಿನಲ್ಲಿ ತರಗತಿಗಳೇ ನಡೆಯುತ್ತಿಲ್ಲವೆಂದೂ, ಇನ್ನು ಕೆಲವು ಕಾಲೇಜುಗಳಲ್ಲಿ ಇರುವ ಶಿಕ್ಷಕರ ಸಂಖ್ಯೆಯು ನಿಗದಿತ ಸಂಖ್ಯೆಗಿಂತ ಬಹಳಷ್ಟು ಕಡಿಮೆ– ಈ ಮುಂತಾದ ಮಾತುಗಳನ್ನು ಈಚೆಗೆ ನಾವು ವಿದ್ಯಾರ್ಥಿಗಳಿಂದಲೂ ಶಿಕ್ಷಕ ತರಬೇತುದಾರರಿಂದಲೂ ಕೇಳುತ್ತಿದ್ದೇವೆ. ಹೊಸ ಕಾಲೇಜುಗಳ ಸಂಖ್ಯೆಯನ್ನು ಹಾಗೂ ಶಿಕ್ಷಕರ ತರಬೇತಿದಾರರ ಭರ್ತಿಯನ್ನು ಬಲು ಎಚ್ಚರಿಕೆಯಿಂದ ರಚಿಸಲಾದ ಸಮಿತಿಗಳ ಹಾಗೂ ತಪಾಸಣೆಗಳ ಮೂಲಕವೂ ಹತೋಟಿಯಲ್ಲಿ ಇಟ್ಟುಕೊಳ್ಳಲು ಎನ್‌ಸಿಟಿಇ (ನ್ಯಾಶನಲ್ ಕೌನ್ಸಿಲ್ ಆಫ್ ಟೀಚರ್ ಎಜುಕೇಶನ್) ಮಾಡುತ್ತಿರುವ ಪರಿಶ್ರಮಗಳು ಯಾವುದೇ ಫಲವನ್ನು ನೀಡುತ್ತಿಲ್ಲ.

ಕಾಲೇಜುಗಳ ಅಗತ್ಯತೆಗೂ ನೀಡಲಾಗುತ್ತಿರುವ ಪರವಾನಿಗೆಗಳಿಗೂ ಯಾವುದೇ ಸುಸಂಬದ್ಧತೆ ಇಲ್ಲ. ಅಲ್ಲದೆ ಹೊಸ ಕಾಲೇಜುಗಳಿಗೆ ಪರವಾನಿಗೆಗಳನ್ನು ತಮ್ಮಲ್ಲಿ ವಿಚಾರಿಸದೇ ನೀಡಲಾಗುತ್ತಿದೆಯೆಂದು ಹಲವು ರಾಜ್ಯ ಸರಕಾರಗಳು ಭಾವಿಸುತ್ತಿವೆ. ನೀತಿ–ನಿಯಮ ಉಲ್ಲಂಘಿಸಿ ನಡೆಯುತ್ತಿರುವ ಖಾಸಗಿ ಶಿಕ್ಷಕ ತರಬೇತಿ ಕಾಲೇಜುಗಳ ವಿರುದ್ಧ ತಾವು ಉದ್ದೇಶಿಸಿರುವ ಕ್ರಮ ಕೈಗೊಳ್ಳಲು ವಿಶ್ವವಿದ್ಯಾಲಯಗಳಿಗೂ ರಾಜ್ಯ ಸರಕಾರಗಳಿಗೂ ಎನ್‌ಸಿಟಿಇ(NCTE) ದೆಸೆಯಿಂದ ಸಾಧ್ಯವಾಗುತ್ತಿಲ್ಲ. ಕಾಲೇಜುಗಳಿಗೆ ಪರವಾನಿಗೆ ನೀಡುವುದು, ಸಾಂಸ್ಥಿಕ ಮೂಲ ಸೌಲಭ್ಯಗಳು ಹಾಗೂ ಶಿಕ್ಷಕರ ನೇಮಕ ಸೇರಿದಂತೆ ವಿವಿಧ ವಿಚಾರಗಳಲ್ಲಿ ಮಾರ್ಗದರ್ಶಿ ಸೂತ್ರಗಳನ್ನು ನಿಗದಿ ಮಾಡುವುದು, ಕಾರ್ಯಕ್ರಮದ ಅವಧಿ, ನಿರೀಕ್ಷೆಗಳು, ಮೌಲ್ಯಮಾಪನಗಳೆಲ್ಲ ಎನ್‌ಸಿಟಿಇ ಯ ಹೊಣೆಗಾರಿಕೆಗಳಾಗಿದ್ದು ಇವೆಲ್ಲವೂ ಈ ಹಲವಾರು ವಿಷಯಗಳ ಮೇಲೆ ಅವಲಂಬಿತವಾಗಿವೆ.

**ಮೌಲ್ಯಮಾಪನ ಅರ್ಥಪೂರ್ಣವೇ?**

ಸೇವಾಪೂರ್ವ ತರಬೇತಿಯನ್ನು ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದು ಹಾಗೂ ಅರ್ಹತಾಪತ್ರ ಪಡೆಯುವುದು ಎನ್ನುವ ಮಟ್ಟಕ್ಕೆ ಇಳಿಸಿರುವುದು ಭಯಂಕರ ಪರಿಣಾಮಗಳಿಗೆ ಕಾರಣವಾಗಿದೆ. ಶಿಕ್ಷಕರ ಗುಣಮಟ್ಟವನ್ನು ಯಾಂತ್ರಿಕ ಹಾಗೂ ಉಸ್ತುವಾರಿ ಮತ್ತು ತಪಾಸಣಾ ರೂಪದ ನಿರ್ಬಂಧಗಳ ಮೂಲಕ ನಿಯಂತ್ರಿಸುವ ಹೆಚ್ಚು ಹೆಚ್ಚು ಪ್ರಯತ್ನಗಳು ನಡೆದಂತೆ ಶಿಕ್ಷಕ ಅಭ್ಯರ್ಥಿಗಳ ಕಲಿಯುವ ಪ್ರಯತ್ನದಲ್ಲಿ ಅಷ್ಟೇ ಪ್ರಮಾಣದಲ್ಲಿ ಹಿನ್ನಡೆಯಾಗಿದೆ. ಈಗಿನ ನಮ್ಮ ಬೇರೆಲ್ಲಾ ಶಿಕ್ಷಣದಂತೆಯೇ ಈ ಶಿಕ್ಷಣಕ್ಕಾಗಿ ನಡೆಸುವ ವಿಶ್ವವಿದ್ಯಾಲಯದ ಪರೀಕ್ಷೆಗಳೂ ಪರೀಕ್ಷಾರ್ಥಿಯ ನೈಜ ಕಲಿಕಾ ಸಾಮರ್ಥ್ಯವನ್ನು ಅರಿತುಕೊಳ್ಳುವ ಶಕ್ತಿಯುಳ್ಳ ಹಾಗೂ ಮೌಲ್ಯಮಾಪನ ಮಾಡುವುದಕ್ಕೆ ಸಮರ್ಥವಾದ ಸಾಧನವಾಗಿ ವಿನ್ಯಾಸಗೊಂಡಿಲ್ಲ. ಪ್ರಶ್ನೆಗಳ ಸ್ವಭಾವ– ಅಷ್ಟೇ ಏಕೆ ಪ್ರಶ್ನೆಗಳೇ ಪೂರ್ವನಿರ್ಧರಿತ ಮಾದರಿಯಲ್ಲಿ ಇದ್ದು ಅವುಗಳಿಗೆ ಉತ್ತರಿಸಲು ಆಲೋಚನೆಗಳೇ ಬೇಕಾಗುವುದಿಲ್ಲ. ಮೌಲ್ಯಮಾಪನವೂ ಬಹುತೇಕ ಎಲ್ಲರೂ ಉತ್ತೀರ್ಣರಾಗುವಂತೆಯೇ ಇರುತ್ತದೆ. ವಾಸ್ತವಿಕವಾಗಿ ಆಯ್ಕೆಯ ಪ್ರಕ್ರಿಯೆಯಲ್ಲಿಯೂ ಅಭ್ಯರ್ಥಿಯಿಂದ ಆಕೆಯ ಬಿ.ಎಡ್. ಅನುಭವದ ಕುರಿತಾಗಲಿ ಪಡೆದ ಅಂಕಗಳ ವಿಷಯದಲ್ಲಾಗಲಿ ಹೆಚ್ಚಿನ ನಿರೀಕ್ಷೆಯೇನೂ ಇರುವುದಿಲ್ಲ. ಪರೀಕ್ಷೆಯಲ್ಲಿ ಹೆಚ್ಚಿನವರು ಎರಡೂ ವಿಭಾಗಗಳಲ್ಲಿ (ಸಿದ್ಧಾಂತ ಹಾಗೂ ತರಗತಿಯ ಅಧ್ಯಾಪನದ ಅನುಭವ) ಪ್ರಥಮ ಸ್ಥಾನವನ್ನು ಪಡೆಯುತ್ತಾರೆ. ಒಂದು ವೇಳೆ ಪಡೆದಿಲ್ಲವಾದರೂ ಅದು ಆಯ್ಕೆಯ ಪ್ರಕ್ರಿಯೆಯಲ್ಲಿ ಯಾವ ಮಹತ್ವವನ್ನೂ ಬೀರುವುದಿಲ್ಲ. ನೀವು ಬಿ.ಎಡ್. ತರಗತಿಗೆ ಪ್ರವೇಶ ಪಡೆದುಕೊಂಡಿರುವಿರಾದರೆ ಆಮೇಲೆ ನೀವು ಅಥವಾ ನಿಮ್ಮ ಕಾಲೇಜು ಏನೇ ಮಾಡಿರಿ ಅಥವಾ ಮಾಡದಿರಿ– ನಿಮಗೆ ಅರ್ಹತಾಪತ್ರ ಖಾತರಿ. ವಿಶ್ವವಿದ್ಯಾಲಯವನ್ನಾಗಲಿ ಅದರ ನಿಯಮ ನಿಬಂಧನೆಗಳನ್ನಾಗಲಿ ಯಾರೂ ಲೆಕ್ಕಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಬಿ.ಎಡ್. ತರಬೇತಿಯನ್ನು ಎರಡು ವರ್ಷಗಳ ಕೋರ್ಸ್ ಆಗಿ ವಿಸ್ತರಿಸಿದ ನಿರ್ಧಾರದ ಪರಿಣಾಮಗಳು ಆಸಕ್ತಿದಾಯಕ. ಈ ಪರಿಣಾಮಗಳು ಮುಂದಿನ ಕೆಲವು ದಶಕಗಳಲ್ಲಿ ಅನಾವರಣಗೊಳ್ಳಲಿದ್ದು ಈ ಮಹತ್ತರ ತೀರ್ಮಾನದಿಂದ ಏನೆಲ್ಲ ಪ್ರಯೋಜನಗಳು ಆಗಿವೆ ಎಂಬುದು ಆಗ ತಿಳಿಯಲಿದೆ.

**ಸಾರಾಂಶ:**

ಸೇವಾಪೂರ್ವ ತಯಾರಿಯ ಕುರಿತು, ಅಥವಾ ಭವಿಷ್ಯತ್ ಶಿಕ್ಷಕಿಯರ ಅಥವಾ ಕಾರ್ಯನಿರತ ಶಿಕ್ಷಕಿಯರನ್ನು ರೂಪಿಸುವ ಕುರಿತು ಚರ್ಚಿಸಬೇಕಾದ ಮುಖ್ಯ ವಿಷಯವೆಂದರೆ ಒಂದು ದೃಷ್ಟಿಕೋನವನ್ನು, ಒಂದು ಒಲವನ್ನು, ಒಂದು ಬದ್ಧತೆ ಹಾಗೂ ಒಂದು ಕರ್ತೃತ್ವ ಶಕ್ತಿಯನ್ನು ರೂಪಿಸುವುದೇ ಆಗಿದೆ. ಸ್ಪಷ್ಟವಾಗಿ, ಈ ದೃಷ್ಟಿಕೋನ ಬಹು–ಮಗ್ಗುಲುಗಳನ್ನು ಹೊಂದಿದ್ದು ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಸಂರಚನೆಗಳ ಆಯಾಮಗಳನ್ನು ಪಡೆದು ಸಂವಿಧಾನವನ್ನು ಕಾರ್ಯರೂಪಕ್ಕೆ ತರುವ ಅಗತ್ಯಕ್ಕೆ ಒತ್ತು ಕೊಡುತ್ತದೆ, ಅದರ ಇನ್ನಿತರ ಅಂಶಗಳಲ್ಲಿ ಶಿಕ್ಷಣಾರ್ಥಿಯ ಕಡೆಗಿನ ದೃಷ್ಟಿಕೋನವಲ್ಲದೆ ಸಮುದಾಯದ ಕಡೆಗಿನ ದೃಷ್ಟಿಕೋನಕ್ಕೂ ಸಂಬಂಧಿಸಿದೆ. ಸಮುದಾಯದಲ್ಲಿ ನಾನಾರೀತಿಯ ವಿವಿಧತೆಗಳಿದ್ದು ಇವುಗಳ ಪರಿಣಾಮವಾಗಿ ಸಮುದಾಯವು ಭಿನ್ನಾಭಿಪ್ರಾಯಗಳಿಂದ ಬಾಧಿತವೂ ಆಗಿದೆ; ಅನೇಕ ಸಂದರ್ಭಗಳಲ್ಲಿ ಅದು ಹಗೆತನ,

ಉಪೇಕ್ಷೆ, ತುಚ್ಛೀಕರಣ, ಪರಿಹಾಸ ಹಾಗೂ ಕೆಲವೊಮ್ಮೆ ಬಹಿರಂಗ ದ್ವೇಷ ಸಾಧನೆ ಮುಂತಾದ ರೂಪಗಳನ್ನು ಪಡೆದುಕೊಳ್ಳುತ್ತದೆ. ಇಂತಹ ಸನ್ನಿವೇಶದಲ್ಲಿ ಶಿಕ್ಷಕರು ತಮ್ಮ ಸಾಂಸ್ಕೃತಿಕ ಬೆಳವಣಿಗೆಯ ಹಿನ್ನೆಲೆಯನ್ನು, ಪ್ರಕೃತಿಯನ್ನು ಅರ್ಥಮಾಡಿಕೊಳ್ಳುವ ತಮ್ಮದೇ ಆದ ಬಗೆಯನ್ನು ಹಾಗೂ ಸಮುದಾಯದೊಳಗಣ ಇಂದಿನ ವಿವಿಧತೆಯ ಸ್ವರೂಪವನ್ನು ಹಾಗೂ ಅದರ ಕಾರಣಗಳನ್ನು ಮರೆಯುವಂತೆ ಮಾಡಿ, ಅವರಲ್ಲಿ ಬೇರೆಯವರಿಗೆ ಗೌರವ ಕೊಡುವ ಗುಣವನ್ನು ಹಾಗೂ ಬೇರೆಯವರನ್ನೂ ತಮ್ಮಂತೆ ಮಾಡಿಕೊಳ್ಳುವ ಗುಣವಿಶೇಷಗಳನ್ನು ತುಂಬಿಸುವುದೆಂತು? ತಮ್ಮದಕ್ಕಿಂತ ತೀರಾ ಭಿನ್ನವಾದ ಸಾಮಾಜಿಕ, ಸಾಂಸ್ಕೃತಿಕ, ಭಾಷಿಕ, ಆರ್ಥಿಕ ಹಾಗೂ ಜೀವನಶೈಲಿಯನ್ನು ಹೊಂದಿರುವ ಮಕ್ಕಳ ಜತೆಗೆ ಏಗುವ ಬದ್ಧತೆಯನ್ನು ಶಿಕ್ಷಕ ಅಭ್ಯರ್ಥಿಗಳಲ್ಲಿ ಮೂಡಿಸುವುದು ಹಾಗೂ ಅವರ ಈ ಸೆಣಸಾಟದಲ್ಲಿ ತಮ್ಮ ಅನುಕಂಪ ಸಹಿತ ಬೆಂಬಲವನ್ನು ನೀಡುವಂತೆ ಮಾಡುವುದೆಂತು? ಅವರು ಅಂತಹ ಪರಿಶ್ರಮವನ್ನು ಮಾಡಬೇಕಾಗಿರುವುದಾದರೂ ಯಾಕೆ? ಸಮರ್ಪಕವಾದ ಮನೋಧರ್ಮ, ಉದ್ದೇಶ, ಸಂವಿಧಾನದ ಪೀಠಿಕೆಯಲ್ಲಿ ಉಲ್ಲೇಖಿಸಿರುವ ತತ್ವಪ್ರಣಾಲಿಗೆ ಅನುಗುಣವಾಗಿ ಸಾಗುವ ಬದ್ಧತೆಯನ್ನು ಹೊಂದಿರುವ ಶಿಕ್ಷಕರನ್ನು ನಾವು ಹೇಗೆ ತಯಾರಿಸುತ್ತೇವೆ ಹಾಗೂ ಅವರು ತಮ್ಮ ಪಾತ್ರದಲ್ಲಿ ಸಮಾಜಕ್ಕೆ ಸುದೀರ್ಘವಾದ ಸೇವೆಯನ್ನು ನೀಡುವಂತೆ ಹೇಗೆ ಮಾಡುತ್ತೇವೆ ಎಂಬುದೇ ಪ್ರಶ್ನೆ. ಏಕಕಾಲದಲ್ಲಿ ಸಮಾಜ ಹಾಗೂ ಆಡಳಿತ ವ್ಯವಸ್ಥೆಯು ಶಿಕ್ಷಕರತ್ತ ನೋಡುವ ವಿಧಾನವನ್ನು ಮರುಪರಿಶೀಲಿಸಬೇಕೆ?

**ಆಕರ :**


- ಶಿಕ್ಷಕರ ಅಭಿವೃದ್ಧಿ ಮತ್ತು ನಿರ್ವಹಣೆಯ ಕುರಿತು 23-25 ಫೆಬ್ರವರಿ, 2009 ರಂದು ಉದಯಪುರದಲ್ಲಿ ಜರುಗಿದ ಸಮ್ಮೇಳನದ ವರದಿ. (2009) ಪಡೆದದ್ದು: http;//www.teindia.nic.in/files/TE-Vikram/internaionalconference/internationalconference_Teacher Development-Udaipur-23-25 feb,
- ಫೆ. ೨–೨೦೧೦ ರಂದು ನವದೆಹಲಿಯಲ್ಲಿ ಮಾನವ ಸೇವಾ ಅಭಿವೃದ್ಧಿ ಸಚಿವಾಲಯ ಆಶ್ರಯದಲ್ಲಿ NCERTಯು ಜರುಗಿಸಿದ ಸೇವಾಪೂರ್ವ ಶಿಕ್ಷಕರ ಅಂತಾರಾಷ್ಟ್ರೀಯ ಸೆಮಿನಾರಿನ ವರದಿ.
- ಶಿಕ್ಷಕರ ಶಿಕ್ಷಣದ ಜಾಯಿಂಟ್ ರಿವ್ಯೂ ಮಿಶನ್ (2013)

ಪಡೆದದ್ದು: http://www.teindia.nic.in/files/jrm/JRM_Reports/JRM_Chhattisgarh-final.pdf

- ಶಿಕ್ಷಕರ ಶಿಕ್ಷಣದ ಆಂಧ್ರಪ್ರದೇಶ ಜಾಯಿಂಟ್ ರಿವ್ಯೂ ಮಿಷನ್ ಫೆಬ್ರವರಿ 2014.
- www.teindia.nic.in/Files/jrm/2014-15/AP/APReport.pdf



ಹೃದಯಕಾಂತ್ ಅವರು ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿದ್ದಾರೆ. ಏಕಲವ್ಯ ಸ್ಥಾಪಕ ಗುಂಪಿನ ಸದಸ್ಯರು ಹಾಗೂ ಉದಯಪುರದ ವಿದ್ಯಾಭವನ ಸೊಸೈಟಿಯ ಸಲಹೆಗಾರರು. ಅವರು ಕಳೆದ 40 ವರ್ಷಗಳಿಂದ ಹಲವಾರು ರೀತಿಯಲ್ಲಿ ಹಾಗೂ ಅಂಶಗಳನ್ನು ಒಳಗೊಂಡಂತೆ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಮುಖ್ಯವಾಗಿ ರಾಜ್ಯಗಳ ಶಿಕ್ಷಣ ಕ್ಷೇತ್ರದ ಸ್ವರೂಪದ ನವೀಕರಣ ಹಾಗೂ ಸುಧಾರಣೆಗಾಗಿನ ಪರಿಶ್ರಮಗಳಲ್ಲಿ ಭಾಗಿಯಾಗಿದ್ದಾರೆ. ಅವರನ್ನು ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಬಹುದು :

hardy.dewan@gmail.com


----.